**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:14-02-2025**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎ. ವಕೀಲರಿಂದ**

ನನಗೆ ಈ ದಾವೆ ಬಗ್ಗೆ ಮಾಹಿತಿ ಇರುತ್ತದೆ. ಈ ದಾವೆಯನ್ನು ರಸ್ತೆಗಾಗಿ ಹೂಡಿರುತ್ತಾರೆ. ಹುತ್ತಪ್ಪರವರು ಇನ್ನೊಬ್ಬರ ನಡುವೆ ಈ ದಾವೆ ಇರುತ್ತದೆ. ಅವರ ಹೆಸರು ನನಗೆ ಗೊತ್ತಿಲ್ಲ. ವಾದಿ ಈ ದಾವೆಯನ್ನು ರಸ್ತೆ ಸಲುವಾಗಿ ಹೂಡಿರುತ್ತಾರೆ. ವಾದಿ ನನಗೆ ಅಂಗಡಿ ವ್ಯವಹಾರದಿಂದ ಪರಿಚಯ ಇರುತ್ತಾರೆ. ನನ್ನ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ವಾದಿಯ ಆಸ್ತಿಯ ಪಕ್ಕದಲ್ಲಿ ನನ್ನ ನಿವೇಶನ ಇರುತ್ತದೆ. ನನ್ನ ನಿವೇಶನ ನಂಬರ್ ನೆನಪಿಲ್ಲ. ಆದರೆ ಇ ಸ್ವತ್ತು ಇರುತ್ತದೆ. ನನ್ನ ಜಮೀನಿನ ದಾಖಲಾತಿಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಾವಾ ಅಸ್ತಿಯ ಪೂಃ ಖಾಲಿ ಮೈದಾನ ಪಃ ಇತರರ ಮನೆಗಳು ಉಃ ನಿವೇಶನಗಳು ದಃ ಹುತ್ತಪ್ಪನವರ ಮನೆ ಇದೆ. ಉತ್ತರಕ್ಕೆ ಇರುವ ನಿವೇಶನಗಳು ಯಾರು ಎಂದು ಗೊತ್ತಿಲ್ಲ. ದಾವಾ ಆಸ್ತಿಯ ಪಕ್ಕದಲ್ಲಿ ನನ್ನ ನಿವೇಶನ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಆಸ್ತಿಗೆ ನೇರವಾಗಿ ಪುರಸಭೆಯ ಕಾಂಕ್ರಿಟ್ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಾಂಕ್ರಿಟ್ ರಸ್ತೆ ಇದ್ದು ಅದು ಪ್ರಯೋಜನ ಇರುವುದಿಲ್ಲ ಎಂದು ನುಡಿಯುತ್ತಾರೆ, ಅಲ್ಲಿ ಕಾಲೋನಿ ಮತ್ತು ಸಣ್ಣ ರಸ್ತೆ ಇರುವುದರಿಂದ ಪ್ರಯೋಜನ ಇಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಯ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸ್ವತ್ತಿನಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿರವರು ವಾದಿಗೆ ರಸ್ತೆ ಉಪಯೋಗಿಸುವ ಸಂಬಂಧ ಬೆದರಿಕೆ ಹಾಕಿರುತ್ತಾರೆ ಎಂದು

ಬರೆಸಿದ್ದು ನಾನು ಆ ಸಮಯದಲ್ಲಿ ಇರಲಿಲ್ಲ. ಪ್ರತಿವಾದಿ ರಸ್ತೆ ಉಪಯೋಗಕ್ಕೆ ತೊಂದರೆ ನೀಡಿರುವ ಬಗ್ಗೆ ದೂರನ್ನು ದಾಖಲು ಮಾಡಿರುತ್ತಾರೆ. ದೂರಿನ ಸಂಬಂಧ ದಾಖಲಾತಿಗಳು ಇರುವುದಿಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ  ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಪ್ರಭಾರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**